ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು	:	ಡಾ: ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ	:	1342
ಉತ್ತರಿಸಬೇಕಾದ ದಿನಾಂಕ	:	21.12.2018

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಸಹಕಾರಿ ಬ್ಯಾಂಕುಗಳಲ್ಲಿ ರೈತರು ಪಡೆದಿರುವ ಸಾಲ ಮೊತ್ತವೆಷ್ಟು? ಸಾಲದ ಮರುಪಾವತಿ ಕಳೆದ ಐದು ವರ್ಷಗಳಲ್ಲಿ ಯಾವ ರೀತಿ ಇದೆ: (ಪಡೆದಿರುವ ಸಾಲಗಳ ವಿವಿದ್ದೋದ್ದೇಶಗಳ ಮಾಹಿತಿ ಒದಗಿಸುವುದು)</td><td>ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಂದ 2018-19ನೇ ಸಾಲಿನಲ್ಲಿ (01.01.2018 ರಿಂದ 30.11.2018ರವರೆಗೆ) ರೈತರು ವಿವಿಧ ಉದ್ದೇಶಗಳಿಗೆ ಪಡೆದ ಸಾಲದ ವಿವರ ಈ ಕೆಳಗಿನಂತಿದೆ.
(ರೂ.ಕೋಟಿಗಳಲ್ಲಿ)
<table>
<tr><th>ವಿವರ</th><th>ಸಂಖ್ಯೆ</th><th>ಮೊತ್ತ</th></tr>
<tr><td>ಅಲ್ಪಾವಧಿ ಕೃಷಿ ಸಾಲ</td><td>1223985</td><td>6799.21</td></tr>
<tr><td>ಮಧ್ಯಮಾವಧಿ ಕೃಷಿ ಸಾಲ</td><td>15563</td><td>319.70</td></tr>
<tr><td>ಒಟ್ಟು</td><td>1239548</td><td>7118.91</td></tr>
</table>
ಕಳೆದ ಐದು ವರ್ಷಗಳಿಂದ ಸಾಲದ ಮರುಪಾವತಿ ಶೇಕಡವಾರು ವಿವರವನ್ನು ಈ ಕೆಳಗೆ ನೀಡಲಾಗಿದೆ.
<table>
<tr><th>ವರ್ಷ</th><th>ಅಲ್ಪಾವಧಿ ಕೃಷಿ ಸಾಲ (ಶೇ)</th><th>ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ (ಶೇ)</th></tr>
<tr><td>2013-14</td><td>95.26</td><td>82.42</td></tr>
<tr><td>2014-15</td><td>92.86</td><td>73.24</td></tr>
<tr><td>2015-16</td><td>97.48</td><td>93.45</td></tr>
<tr><td>2016-17</td><td>97.50</td><td>69.28</td></tr>
<tr><td>2017-18</td><td>88.10</td><td>84.87</td></tr>
</table></td></tr>
<tr><td>ಆ)</td><td>ಸಾಲ ಮರುಪಾವತಿ ಮಾಡದಿರಲು ಯಾವ ಪ್ರಮುಖ ಕಾರಣಗಳು ರೈತರಿಂದ ಕಂಡುಬಂದಿದೆ: ಬ್ಯಾಂಕುಗಳ ಆರ್ಥಿಕ ಸ್ಥಿತಿ ಹೇಗಿದೆ?</td><td>ಸಾಲ ಮರುಪಾವತಿ ಉತ್ತಮವಾಗಿದ್ದು, 2017-18ನೇ ಸಾಲಿನಲ್ಲಿ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಲಾಭ ಪಡೆದಿರುತ್ತವೆ.</td></tr>
<tr><td>ಇ)</td><td>ಸಮ್ಮಿಶ್ರ ಸರ್ಕಾರ ಘೋಷಿಸಿರುವ ರೈತರ ಸಾಲವನ್ನು ಯಾವ ಪ್ರಮಾಣದಲ್ಲಿ: ವಿಧಿಸಿರುವ ಷರತ್ತುಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು).</td><td>2018-19 ನೇ ಸಾಲಿನಲ್ಲಿ ಸಹಕಾರ ಸಂಘಗಳಲ್ಲಿನ ರೈತರ ರೂ.1.00 ಲಕ್ಷಗಳ ಸಾಲ ಮನ್ನಾ ಮಾಡಿದ್ದು, ಅಂದಾಜು 20.38 ಲಕ್ಷ ರೈತರು ರೂ.9448.61 ಕೋಟಿಗಳ ಲಾಭ ಪಡೆಯಲಿದ್ದಾರೆ. ಈ ಯೋಜನೆಯ ಷರತ್ತುಗಳು ಈ ಕೆಳಕಂಡಂತೆ ಇರುತ್ತವೆ.
1. ಸಹಕಾರ ಸಂಘಗಳಲ್ಲಿ ಅಂದರೆ ಪ್ಯಾಕ್ಸ್, ಡಿಸಿಸಿ ಬ್ಯಾಂಕಿನ ಶಾಖೆಗಳು ಮತ್ತು ಪಿಕಾರ್ಡ್ ಬ್ಯಾಂಕುಗಳಲ್ಲಿ ರೈತರು ಬೆಳೆ ಸಾಲ ಪಡೆದು ದಿ.10-7-2018 ಕ್ಕೆ ಹೊರಬಾಕಿ ಹೊಂದಿರಬೇಕು.
2. ಕುಟಂಬಕ್ಕೆ ಗರಿಷ್ಠ ರೂ.1 ಲಕ್ಷಗಳ ವರೆಗೆ ಸಾಲ ಮನ್ನಾ ದೊರೆಯುತ್ತದೆ.</td></tr>
</table>

		3. ಸಾಲ ಮನ್ನಾ ಸೌಲಭ್ಯವು ರೈತರು ಮರುಪಾವತಿ ಮಾಡಬೇಕಾದ ಗಡುವಿನ ದಿನಾಂಕಕ್ಕೆ ಜಾರಿಗೆ ಬರುತ್ತದೆ. 4. ಕುಟುಂಬದಲ್ಲಿ ಯಾವುದೇ ಸದಸ್ಯನು ರೂ.20000/ ಕ್ಕಿಂತ ಹೆಚ್ಚಿನ ವೇತನ/ಪಿಂಚಣಿ ಪಡೆಯುತ್ತಿದ್ದಲ್ಲಿ ಅಥವಾ ಕಳೆದ ಮೂರು ವರ್ಷಗಳಲ್ಲಿ ಆದಾಯ ತೆರಿಗೆ ಪಾವತಿಸಿದಲ್ಲಿ ಅಂತಹ ರೈತರಿಗೆ ಈ ಸೌಲಭ್ಯ ದೊರೆಯುವುದಿಲ್ಲ. 5. ದಿ.10-7-2018 ಕ್ಕೆ ಸಾಲವು ಚಾಲ್ತಿ ಇದ್ದು, ರೂ 1 ಲಕ್ಷಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಹೆಚ್ಚಿನ ಮೊತ್ತವನ್ನು ಗಡುವು ದಿನಾಂಕದೊಳಗೆ ಮರುಪಾವತಿಸಬೇಕು. 6. ದಿ.10-7-2018 ಕ್ಕೆ ಸಾಲವು ಸುಸ್ತಿ ಇದ್ದಲ್ಲಿ ಮಾರುಪಾವತಿ ದಿನಾಂಕದವರೆಗಿನ ಬಡ್ಡಿಯನ್ನು ಮತ್ತು ರೂ 1 ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ದಿ.31-3-2019 ರೊಳಗೆ ಮರುಪಾವತಿಸಬೇಕು. 7. ಸಹಕಾರ ಸಂಘಗಳಲ್ಲಿ ಸಾಲ ಮನ್ನಾ ಸೌಲಭ್ಯ ಪಡೆದ ರೈತರಿಗೆ ವಾಣಿಜ್ಯ ಬ್ಯಾಂಕಿನಲ್ಲಿ ಸಾಲ ಮನ್ನಾ ಸೌಲಭ್ಯ ದೊರೆಯುವುದಿಲ್ಲ.
ಈ)	ಸಹಕಾರಿ ವ್ಯವಸ್ಥೆಯು ರೈತರ ನಡುವೆ ಫಲಪ್ರದವಾಗಿ ಅವರ ಜೀವನ ಮಟ್ಟ ಸುಧಾರಿಸಲು ಸರ್ಕಾರದ ವಿಶೇಷ ಯೋಜನೆಗಳೇನು ?	ಸಹಕಾರ ಸಂಘಗಳ ಮೂಲಕ ರೈತರಿಗೆ ಈ ಕೆಳಕಂಡ ವಿಶೇಷ ಯೋಜನೆಗಳು ಇರುತ್ತವೆ. 1. ಶೂನ್ಯ ಬಡ್ಡಿ ದರಲ್ಲಿ ಬೆಳೆ ಸಾಲ ನೀಡುವ ಯೋಜನೆ ರಾಜ್ಯದ ರೈತರು ಕೃಷಿ ಚಟುವಟಿಕೆ ಕೈಗೊಳ್ಳಲು ಅನುಕೂಲವಾಗುವಂತೆ ರೂ.3.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲವನ್ನು ಶೂನ್ಯ ಬಡ್ಡಿದರದಲ್ಲಿ ನೀಡಲಾಗುತ್ತದೆ. 2. ಶೇ.3 ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡುವ ಯೋಜನೆ ರಾಜ್ಯದ ರೈತರಿಗೆ ರೂ.10.00 ಲಕ್ಷಗಳವರೆಗೆ ಮಧ್ಯಮಾವಧಿ ಕೃಷಿ ಸಾಲವನ್ನು ಶೇಕಡ 3ರ ಬಡ್ಡಿದರದಲ್ಲಿ ನೀಡಲಾಗುತ್ತದೆ. 3. ಸಹಕಾರ ಸಂಘಗಳಲ್ಲಿ ಸದಸ್ಯತ್ವಕ್ಕಾಗಿ ಶೇರು ಸಹಾಯಧನ ಸಹಕಾರ ಸಂಘಗಳಲ್ಲಿ ರೈತರು ಸದಸ್ಯತ್ವ ಪಡೆಯಲು ಸರ್ಕಾರದಿಂದ ಶೇರು ಧನವನ್ನು ಭರಿಸಲಾಗುತ್ತದೆ. 4. ಇದಲ್ಲದೇ ಕೆಲವು ಸಹಕಾರ ಸಂಘಗಳ ಮೂಲಕ ಬೆಂಬಲ ಬೆಲೆ ಯೋಜನೆಯಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸಲಾಗುತ್ತದೆ. 5. ಸಹಕಾರ ಸಂಘಗಳ ಮೂಲಕ ಖರೀದಿಸುವ ಪ್ರತೀ ಲೀಟರ್ ಹಾಲಿಗೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತದೆ.

ಸಿಓ 313 ಸಿಎಲ್‌ಎಸ್ 2018

(ಬಂಡೆಪ್ಪ ಖಾಶೆಂಪೂರ)
ಸಹಕಾರ ಸಚಿವರು